# ಪೆಪ್ಸಿಗೆ ಇಂದ್ರಾ ವಿದಾಯ

ಇಂದ್ರಾ ನೂಯಿ ಪೆಪ್ಸಿಕೋ ಕಂಪನಿಯಿಂದ ನಿರ್ಗಮಿಸುವುದಾಗಿ ಪ್ರಕಟಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ತಂಪು ಪಾನೀಯ ಮತ್ತು ಆರೋಗ್ಯ ಪೇಯದ ಕಂಪನಿಗಳಲ್ಲಿ ಎರಡನೇ ಸ್ಥಾನದಲ್ಲಿರುವ ಪೆಪ್ಸಿಕೋದ ಪ್ರತಿಷ್ಠಿತ ಸಿಇಓ ಹುದ್ದೆಯಿಂದ ಅವರು ಅಕ್ಟೋಬರ್ 3ರಂದು ನಿವೃತ್ತಿ ಆಗಲಿದ್ದಾರೆ. ಈಗಾಗಲೆ ಕಂಪನಿಯ ಹೊಸ ಸಿಇಓ ಹೆಸರು ಪ್ರಕಟವಾಗಿದೆ. ಅಧಿಕಾರ ಹಸ್ತಾಂತರ ಸುಸೂತ್ರವಾಗಲು ಇಂದ್ರಾ ನೂಯಿ ಅವರು ಅಕ್ಟೋಬರ್ ಬಳಿಕವೂ ಕೆಲ ತಿಂಗಳ ಕಾಲ ಸಂಸ್ಥೆಯ ಅಧ್ಯಕ್ಷೆಯಾಗಿ ಮುಂದುವರಿಯಲಿದ್ದಾರೆ. 24 ವರ್ಷಗಳ ಅವರ ಸುದೀರ್ಘ ಸೇವೆ, ಅದರಲ್ಲೂ ಸಿಇಓ ಆಗಿ 12 ವರ್ಷಗಳ ಸಾಧನೆ– ಆ ಕಂಪನಿ ಯಾವತ್ತೂ ನೆನಪಿನಲ್ಲಿ ಇಟ್ಟುಕೊಳ್ಳುವಂತಹದ್ದೇ.

1994ರಲ್ಲಿ ಸೀನಿಯರ್ ವೈಸ್ ಪ್ರೆಸಿಡೆಂಟ್ ಆಗಿ ಪೆಪ್ಸಿಕೋ ಸೇರಿದ ಇಂದ್ರಾ ನೂಯಿ, ಹಂತ ಹಂತವಾಗಿ ಮೇಲೇರಿದವರು. ಅವರ ಹನ್ನೆರಡು ವರ್ಷಗಳ ಸಿಇಓ ಸೇವಾವಧಿಯಲ್ಲಿ ಪೆಪ್ಸಿಕೋದ ಆದಾಯ ಶೇಕಡಾ 80ರಷ್ಟು ಹೆಚ್ಚಳವಾಗಿದೆ. ಕೇವಲ ತಂಪು ಪಾನೀಯ ಮಾರುತ್ತಾ, ಕೋಕಾ ಕೋಲದ ಜತೆಗಿನ ಸ್ಪರ್ಧೆಯಲ್ಲಿ ಏದುಸಿರು ಬಿಡುತ್ತಿದ್ದ ಕಂಪನಿಯನ್ನು ಇನ್ನಷ್ಟು ಲಾಭದಾಯಕವಾಗಿಸಲು ಇಂದ್ರಾ ನೂಯಿ ಆರೋಗ್ಯ ಪೇಯ ಮತ್ತು ಕುರುಕಲು ತಿಂಡಿಗಳ ಕಡೆಗೆ ಗಮನ ಹರಿಸಿದರು. ಇವತ್ತು ಪೆಪ್ಸಿಕೊ ಕಂಪನಿಗೆ ಅತ್ಯಧಿಕ ಲಾಭ ತಂದುಕೊಡುವ ಉತ್ಪನ್ನಗಳಲ್ಲಿ ಬೇಕ್ಡ್ ಪೊಟ್ಯಾಟೊ ಚಿಪ್ಸ್ ಮತ್ತು ಹಣ್ಣು ತರಕಾರಿ ಮಿಶ್ರಣಗಳ ಜ್ಯೂಸ್ ಮುಂಚೂಣಿಯಲ್ಲಿವೆ.

ಭಾರತದಲ್ಲೂ ಪೆಪ್ಸಿಕೋ ಕಂಪನಿಯ ವಹಿವಾಟು ಹೆಚ್ಚಲು ಇಂದ್ರಾ ಸಾಕಷ್ಟು ಪ್ರಯತ್ನ ಪಟ್ಟರು. ಆದರೆ ಕೋಕಾ ಕೋಲಾಗೆ ಪ್ರತಿಸ್ಪರ್ಧೆ ನೀಡಲು ಸಾಧ್ಯವಾಗಲಿಲ್ಲ. 2013ರ ನವೆಂಬರ್‌ನಲ್ಲಿ ಕೋಕಾ ಕೋಲಾ ಕಂಪನಿಯು ಭಾರತದಲ್ಲಿ 5 ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಪ್ರಕಟಿಸಿತ್ತು. ಅದಾಗಿ ವಾರದಲ್ಲಿ ಇಂದ್ರಾ ನೂಯಿ ಭಾರತಕ್ಕೆ ಬಂದರು. ಪೆಪ್ಸಿಕೋ ಬಾಸ್ ಆದ ಬಳಿಕ ಅದು ಭಾರತಕ್ಕೆ ಅವರ ಮೊದಲ ಭೇಟಿ. 2020ರೊಳಗೆ ಭಾರತದಲ್ಲಿ ಪೆಪ್ಸಿಕೋ 5.5 ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಅಗ ಅವರು ಪ್ರಕಟಿಸಿದ್ದರು. ಪೆಪ್ಸಿಕೋ ಇಂಡಿಯಾದ ಆದಾಯು ಹೆಚ್ಚಾಯಿತು. ಆದರೆ ಲಾಭ ಗಳಿಕೆ ಸಾಧ್ಯವಾಗಲಿಲ್ಲ.

ಇಂದ್ರಾ ನೂಯಿ ನಿವೃತ್ತಿಯೊಂದಿಗೆ ಜಾಗತಿಕ ಕಂಪನಿಗಳಲ್ಲಿ ಮಹಿಳಾ ಸಿಇಓ ಗಳ ಪ್ರಾಮುಖ್ಯತೆ ಇನ್ನಷ್ಟು ಕಡಿಮೆಯಾಗಲಿದೆ. ಜಗತ್ತಿನ 500 ಅತಿದೊಡ್ಡ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಇವತ್ತು ಸಿಇಓ ಆಗಿ ಸುಮಾರು 25 ಮಹಿಳೆಯರಷ್ಟೇ ಇದ್ದಾರೆ. ಅದರಲ್ಲೂ ಭಾರತೀಯ ಮಹಿಳೆಯರ ಸಂಖ್ಯೆ ಕಡಿಮೆಯೇ. ಒಂದು ಕಂಪನಿಯ ಸಿಇಓ ಹುದ್ದೆಗೆ ಏರಬೇಕೆಂದರೆ ಅಗಾಧ ಪರಿಶ್ರಮ ಮತ್ತು ಅಪಾರ ಬುದ್ಧಿವಂತಿಕೆ ಬೇಕಾಗುತ್ತದೆ ಎನ್ನುವುದು ಇಂದ್ರಾ ಅವರ ಅನುಭವದಿಂದ ಸಾಬೀತಾಗಿದೆ. ಅದೇನೂ ಸುಲಭದ ಸಾಧನೆಯಾಗಿರಲಿಲ್ಲ. ಚೆನ್ನೈನ ಇಂದ್ರಾ, 1978ರಲ್ಲಿ ದೂರದ ಅಮೆರಿಕದ ಯೇಲ್ ಯೂನಿವರ್ಸಿಟಿಯಲ್ಲಿ ಮಾಸ್ಟರ್ಸ್ ಮಾಡಲು ಹೊರಟಾಗ ಸಾಂಪ್ರದಾಯಕ ಕುಟುಂಬದ ತಂದೆ– ತಾಯಿ, 'ಮದುವೆ ಮಾಡಿಕೊಂಡೇ ಹೋಗು' ಎಂದು ಒತ್ತಾಯಿಸಿದ್ದು ಸುಳ್ಳಲ್ಲ. 18ರ ಹರೆಯದಲ್ಲೇ ಮದುವೆ ಆಗಲು ಅವರ ಮೇಲೆ ಒತ್ತಡವಿತ್ತಂತೆ. ಸ್ಕಾಲರ್‌ಶಿಪ್ ಪಡೆದು, ಕೈಯಲ್ಲಿ 500 ಡಾಲರ್‌ಗಳನ್ನು ಹಿಡಿದುಕೊಂಡು ಅಮೆರಿಕಕ್ಕೆ ಹೋದ ಇಂದ್ರಾ, ಅಲ್ಲಿನ ಖರ್ಚು ವೆಚ್ಚಗಳನ್ನು ಸರಿತೂಗಿಸಲು ಆರಂಭದಲ್ಲಿ ಸಂಸ್ಥೆಯೊಂದರಲ್ಲಿ ರಿಸೆಪ್ಷನಿಸ್ಟ್ ಆಗಿ ಪಾರ್ಟ್‌ಟೈಂ ಕೆಲಸ ಮಾಡಿದ್ದೂ ಉಂಟು.

ಪೆಪ್ಸಿಕೋ ನಿವೃತ್ತಿಯ ಬಳಿಕವೂ ಇಂದ್ರಾ ನೂಯಿ ಅವರಿಗೆ ಕೆಲಸ ಕಡಿಮೆಯಾಗುವುದಿಲ್ಲ. ಹಲವು ಜಾಗತಿಕ ಕಂಪನಿಗಳ ನಿರ್ದೇಶಕ ಮಂಡಳಿಯಲ್ಲಿ ಅವರಿದ್ದಾರೆ. ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ), ಅಮೆರಿಕ–ಭಾರತ ಬಿಸಿನೆಸ್ ಕೌನ್ಸಿಲ್, ಲಿಂಕನ್ ಸೆಂಟರ್, ವಿಶ್ವ ಆರ್ಥಿಕ ವೇದಿಕೆ, ಏಷ್ಯಾ ಸೊಸೈಟಿ, ತ್ಸಿಂಗುವಾ ಯೂನಿವರ್ಸಿಟಿ– ಹೀಗೆ ಎಲ್ಲೆಡೆ ಅವರು ಆಡಳಿತ ಮಂಡಳಿಗಳಲ್ಲಿ ಇದ್ದಾರೆ.

'ಇಷ್ಟು ವರ್ಷಗಳಲ್ಲಿ ನನ್ನ ಕಂಪನಿಯೇ ನನಗೆ ಮೊದಲ ಮನೆಯಂತೆ ಇತ್ತು. ಇನ್ನು ಸ್ವಲ್ಪ ಸಂಸಾರದ ಕಡೆಗೆ ಗಮನ ಕೊಡಬೇಕು. ಒಂದಿಷ್ಟು ವಾರಗಳ ಕಾಲ ಸುಮ್ಮನೆ ಕುಟುಂಬ ಸದಸ್ಯರ ಜತೆಗೆ ಸುತ್ತಾಡಬೇಕು' ಎಂದಿದ್ದಾರೆ ಅವರು. 'ಜಾಗತಿಕ ಕಂಪನಿಗಳ ಟಾಪ್ ಹುದ್ದೆಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಬೇಕು. ಆದರೆ ಎಲ್ಲ ಮಹಿಳೆಯರೂ ಸೂಪರ್ ಮಹಿಳೆಯರಾಗಲು ಆಗುವುದಿಲ್ಲ ಎನ್ನುವುದು ನಿಜ. ನಮಗೆ ಹೆಣ್ಣುಮಕ್ಕಳಿಗೆ ನೂರೆಂಟು ಅಡೆತಡೆಗಳಿವೆ. ದಿನದಲ್ಲಿ 24 ಗಂಟೆ ಮಾತ್ರ ಇರುತ್ತದೆ' ಎನ್ನುವ ಅರಿವೂ ಅವರಿಗಿದೆ.

ಆ್ಯಮ್‌ಸಾಫ್ಟ್ ಸಿಸ್ಟಮ್ಸ್‌ನ ಅಧ್ಯಕ್ಷ ರಾಜ್ ನೂಯಿ ಜತೆಗೆ ಇಂದ್ರಾ ಮದುವೆಯಾದದ್ದು 1980ರಲ್ಲಿ. ಮೊದಲ ಮಗುವಿಗೆ ಅವರು ನಾಲ್ಕು ವರ್ಷಗಳ ಕಾಲ ಕಾದರು. ಕಂಪನಿಯ ಕೆಲಸದ ಒತ್ತಡ ಎಷ್ಟಿತ್ತು ಎನ್ನುವುದಕ್ಕೂ ಇದು ದಿಕ್ಸೂಚಿ. 1984ರಲ್ಲಿ ಮೊದಲ ಮಗಳು ಪ್ರೀತಾ ಹುಟ್ಟಿದಳು. ಅದಾಗಿ 9 ವರ್ಷಗಳ ಬಳಿಕ 1993ರಲ್ಲಿ ಎರಡನೆಯ ಮಗಳು ತಾರಾ ಜನಿಸಿದಳು.

ಕಚೇರಿಯ ಕೆಲಸಕ್ಕೆ ಇಂದ್ರಾ ಬದುಕಿನಲ್ಲಿ ಎಷ್ಟೊಂದು ಆದ್ಯತೆ ಕೊಟ್ಟಿದ್ದರು ಎನ್ನುವುದಕ್ಕೆ ಇದೇ ಸಾಕ್ಷಿ. ಮೊದಲ ಮಗಳೀಗ, ಅಮ್ಮ ಕಲಿತ ಅದೇ ಯೇಲ್ ಯೂನಿವರ್ಸಿಟಿಯಲ್ಲಿ ಎಂಬಿಎ ಮಾಡುತ್ತಿದ್ದಾಳೆ. ತಾರಾ ನೂಯಿ ನ್ಯೂಯಾರ್ಕ್ ಯೂನಿವರ್ಸಿಟಿಯಲ್ಲಿ ಕಲಿಯುತ್ತಿದ್ದಾಳೆ.

ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಹಿಲರ್ ಕ್ಲಿಂಟನ್ ಬೆಂಬಲಕ್ಕೆ ಇಂದ್ರಾ ನೂಯಿ ಬಹಿರಂಗವಾಗಿ ನಿಂತದ್ದು ಆಗ ಸುದ್ದಿಯಾಗಿತ್ತು. ಹಿಲರಿ ಸೋತು ಟ್ರಂಪ್ ಗೆದ್ದ ಬಳಿಕ, ಹೊಸ ಸರಕಾರದ ಜತೆಗೆ ಸಮರಸದ ಕಾರ್ಯನಿರ್ವಹಣೆಗೆ ಇಂದ್ರಾ ಯತ್ನಿಸಿದ್ದೂ ಉಂಟು. ಆದರೆ ಟ್ರಂಪ್ ಸರಕಾರದ ಜತೆಗೆ ಅಂತಹ ಸುಮಧುರ ಸಂಬಂಧವೇನೂ ಆಗಲಿಲ್ಲ. ಅಮೆರಿಕ ಸರ್ಕಾರದ ಕೆಲವು ನೀತಿ ನಿರೂಪಣಾ ಮಂಡಳಿಗಳಿಂದ ಇಂದ್ರಾ ಹೊರಗೆ ಬಂದರು. ಆದರೆ ಇವತ್ತಿಗೂ ಜಾಗತಿಕ ಉದ್ಯಮರಂಗದಲ್ಲಿ ಅವರ ಪ್ರಭಾವ ಕಡಿಮೆಯಾಗಿಲ್ಲ ಎನ್ನುವುದು ನಿಜ.



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65